## ಕುಸಿಯುತ್ತಿದೆ ಸೂರ್ಯ ದೇಗುಲ

ಒಡಿಶಾದ ಕೋನಾರ್ಕ್ ಸೂರ್ಯದೇವಾಲಯ ವಿಶಿಷ್ಟವಾದ ಶಿಲ್ಪಕಲೆಯಿಂದ ಇಡೀ ಜಗತ್ತಿನಲ್ಲಿಯೇ ಹೆಸರಾಗಿದೆ. ಯುನೆಸ್ಕೋದಿಂದ ಮಾನ್ಯತೆ ಪಡೆದಿರುವ ಈ ದೇವಾಲಯ 1278ರಲ್ಲಿ ಗಂಗರ ರಾಜ ಮೊದಲನೇ ನರಸಿಂಹದೇವನಿಂದ ನಿರ್ಮಿಸಲ್ಪಟ್ಟಿದ್ದು. ಈ ವಿಶಿಷ್ಟವಾದ ದೇವಸ್ಥಾನ ಕಟ್ಟಲು 12 ಮಂದಿ ಶಿಲ್ಪಿಗಳು 12 ವರ್ಷಗಳ ಕಾಲ ಹಗಲಿರುಳು ಶ್ರಮಪಟ್ಟರು. 228 ಅಡಿ ಎತ್ತರವಿರುವ ದೇವಾಲಯ ಸೂರ್ಯದೇವನ ರಥದ ಆಕೃತಿಯಲ್ಲಿದ್ದು, 24 ಕಲಾತ್ಮಕವಾದ ಗಾಲಿಗಳು ಮತ್ತು 7 ಅಶ್ವಗಳು ಎಳೆಯುವ ರೀತಿಯಲ್ಲಿದೆ. 24 ಗಾಲಿಗಳು ದಿನದ 24 ಗಂಟೆಗಳ ಮತ್ತು 7 ಅಶ್ವಗಳು ವಾರದ 7 ದಿನಗಳ ಸಂಕೇತ.

ಈ ಭವ್ಯವಾದ ದೇವಾಲಯ ನಿಧಾನವಾಗಿ ನೆಲದೊಳಗೆ ಕುಸಿಯುತ್ತಿದೆ. ಈ ಕುಸಿತಕ್ಕೆ ಹಿಂದೆ ನೆಲದೊಳಗೆ ಹರಿಯುತ್ತಿದ್ದ ನದಿಯೇ ಕಾರಣವಿರಬಹುದೆಂದು ಉಹಿಸಲಾಗಿದೆ. ಕುಸಿಯುವುದನ್ನು ತಡೆಯಲು ವಿದೇಶಗಳಿಂದ ತಂತ್ರಜ್ಞರು ಮತ್ತು ಎಂಜಿನಿಯರ್‌ಗಳನ್ನು ಕರೆತಂದು ಅವರ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇದೇ ಕಾರಣಕ್ಕೆ ದೇವಾಲಯದಲ್ಲಿದ್ದ ಸೂರ್ಯದೇವರ ವಿಗ್ರಹವನ್ನು ಅಲ್ಲಿಂದ 34 ಕಿ.ಮೀ ದೂರದಲ್ಲಿರುವ ಪುರಿ ಜಗನ್ನಾಥ ದೇವಸ್ಥಾನಕ್ಕೆ ಸಾಗಿಸಿ ಪ್ರತಿಷ್ಠಾಪಿಸಲಾಗಿದೆ.

**- ಪಂಪಾಪತಿ ಹಿರೇಮಠ, ಧಾರವಾಡ**





## ತೊಳಿಯೊ ಕಲ್ಲು

ತಂತ್ರಜ್ಞಾನಕ್ಕೂ ಪೂರ್ವದಲ್ಲಿ ನಮ್ಮ ಪೂರ್ವಜರು ಭತ್ತವನ್ನು ಅಕ್ಕಿಯನ್ನಾಗಿಸಲು ತೊಳಿಯೊ ಕಲ್ಲನ್ನು ಉಪಯೋಗಿಸುತ್ತಿದ್ದರು ಎನ್ನುವುದಕ್ಕೆ ಈ ಕಟ್ಟಿಗೆಯ ಬೃಹದಾಕಾರದ ಭತ್ತ ಒಡೆಯುವ ಕಲ್ಲೇ ಸಾಕ್ಷಿ. ಈ ಕಲ್ಲನ್ನು ಇಂದಿಗೂ ಬ್ಯಾಡಗಿ ತಾಲೂಕಿನ ಚಿನ್ನಿಕಟ್ಟಿ ಗ್ರಾಮದ ಶ್ರೇಣಿಕರಾಜ ಯಳವತ್ತಿ ಮನೆಯಲ್ಲಿ ಕಾಣಬಹುದಾಗಿದೆ. ಬೀಸುವ ಕಲ್ಲಿನಲ್ಲಿ ಜೋಳ ಬೀಸುವಂತೆ, ಈ ಕಟ್ಟಿಗೆ ಕಲ್ಲಿನಲ್ಲಿ ಮೂರು ಜನರು ಭತ್ತವನ್ನು ಹಾಕಿ ಅಕ್ಕಿಯನ್ನು ತೆಗೆಯುತ್ತಿದ್ದರು. ಆದರೆ ಇಂದು ದೊಡ್ಡ ದೊಡ್ಡ ಯಂತ್ರಗಳು ಬಂದಿದ್ದರಿಂದ ಈ ಕಲ್ಲುಗಳು ಮನೆಯ ಮೂಲೆ ಸೇರಿವೆ.

**ಚಿತ್ರ- ಬರಹ: ಎಸ್.ಎನ್.ಪೋಲೇಶಿ, ಹಾವೇರಿ**

## ಹಲಸಿನಲ್ಲಿ ರಂಗೋಲಿ

ಮಳೆಗಾಲ ಬಂತೆಂದರೆ ಹಲಸಿನ ಕಾಲ ಎಂಬ ಮಾತಿದೆ. ಹಸಿದು ಹಲಸು.. ಉಂಡು ಮಾವು.. ಎಂಬ ಗಾದೆಯಿದೆ. ವೈದ್ಯರು ಹಣ್ಣು ತಿನ್ನಿ ಅಂದ್ರೆ ಹಲಸಿನ ಹಣ್ಣು ತಿನ್ನಬಹುದಾ ಅಂದ್ನಂತೆ ರೋಗಿ! ಅಷ್ಟು ರುಚಿಕರ ಹಲಸಿನ ಹಣ್ಣಿನ ಸೊಳೆಗಳು. ಅದರಿಂದ ತಯಾರಿಸಿದ ಕಡುಬು, ಜ್ಯೂಸ್, ಪಲ್ಯ, ಉಪ್ಪಿನಕಾಯಿ, ಹಪ್ಪಳ ಮುಂತಾದ ಕುರುಕುರು ಖಾದ್ಯಗಳು ಜನಪ್ರಿಯ ಮತ್ತು ಹಲಸಿನ ಸಿಪ್ಪೆಯಲ್ಲುಳಿದ ಭಾಗಗಳು ದನಪ್ರಿಯವೂ ಹೌದು.

ಇವುಗಳನ್ನೆಲ್ಲಾ ಒಂದೇ ಕಡೆ ತೋರಿಸುವ ಪ್ರಾತ್ಯಕ್ಷಿಕೆ ಹಾಗೂ ಪ್ರದರ್ಶನವನ್ನು ಒಳಗೊಂಡ ರಾಜ್ಯಮಟ್ಟದ ಹಲಸಿನ ಹಬ್ಬವನ್ನು ಉಡುಪಿಯ ಶ್ರೀಕೃಷ್ಣಮಠದ ರಾಜಾಂಗಣದಲ್ಲಿ ಏರ್ಪಡಿಸಿದ್ದರು. ಇಲ್ಲಿ ಆಕರ್ಷಣೆಯ ಕೇಂದ್ರವೆನಿಸಿದ್ದು ಹಲಸಿನ ಹಲವು ತಳಿಗಳ ಸಸಿಗಳ ಮಾರಾಟ ಮತ್ತು ಹಲಸಿನ ಹಣ್ಣು, ಬೀಜಗಳನ್ನೇ ಜೋಡಿಸಿ ರಚಿಸಿದ ಸುಂದರ ರಂಗೋಲಿ. 35 ಅಡಿ ಉದ್ದ, 25ಅಡಿ ಅಗಲದಲ್ಲಿ ಹಲಸಿನ ಮರದ ಆಕಾರದ ಸೃಜನಾತ್ಮಕ ಚಿತ್ರಣವನ್ನು ಮೂಡಿಸಿದವರು ಕಲಾವಿದರಾದ ವೆಂಕಿ ಪಲಿಮಾರು, ರವಿ ಹಿರೆಬೆಟ್ಟು ಮತ್ತು ಶ್ರೀನಾಥ್ ಮಣಿಪಾಲ.

**-ಜೀವನ್ ಶೆಟ್ಟಿ, ಉಡುಪಿ**

